ಕಾಣಿಸಿತು. ತಿರುಮಲೇಶ್ ಸುಲಭವಾಗಿ ತಾವು ಕೆಲಸ ಮಾಡುತ್ತಿದ್ದ ದಕ್ಷಿಣ ಏಷ್ಯಾದ ಏಕೈಕ ಪ್ರತಿಷ್ಠಿತ ಸಂಸ್ಥೆಯಾದ 'ಇಂಗ್ಲಿಷ್ ಮತ್ತು ವಿದೇಶೀ ಭಾಷೆಗಳ ವಿಶ್ವವಿದ್ಯಾಲಯ'ದ ಕುಲಪತಿಯಾಗಬಹುದಿತ್ತು. ಆದರೆ, ಅವರು ಅಧಿಕಾರ ಸ್ಥಾನಗಳ ಮತ್ತು ಪ್ರಭಾವಿ ವಲಯಗಳ ಹತ್ತಿರಕ್ಕೂ ಸುಳಿದವರಲ್ಲ. ಅವರ ಅಕ್ಕಪಕ್ಕದ ಕೋಣೆಗಳಲ್ಲಿದ್ದ ಮಂದಿ ವಿಮಾನಗಳಲ್ಲಿ ಹಾರಾಡುತ್ತಲೇ ತಮ್ಮ ಸೆಮಿನಾರ್ ಪ್ರಬಂಧಗಳನ್ನು ಹೊಂದಿಸಿಕೊಳ್ಳುತ್ತಿದ್ದ ಹೊತ್ತಿನಲ್ಲಿ ತಿರುಮಲೇಶ್ ಸದಾ ತಮ್ಮ ವಿಶ್ವವಿದ್ಯಾಲಯದ ಲೈಬ್ರರಿಯಲ್ಲಿ ಕುಳಿತು ಅಧ್ಯಯನ ಮಾಡುತ್ತಿದ್ದರು. ಪ್ರತಿದಿನ ರಾತ್ರಿ ಎಂಟು ಗಂಟೆಗೆ ಮುಚ್ಚುತ್ತಿದ್ದ ಲೈಬ್ರರಿಯಿಂದ ಹೊರಬರುತ್ತಿದ್ದವರು ಇವರೊಬ್ಬರೇ ಆಗಿರುತ್ತಿದ್ದರು. ಅದಕ್ಕಾಗಿಯೇ ಅವರು ವಿಶ್ವವಿದ್ಯಾಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ನಡುವೆ ಜನಜನಿತರಾಗಿದ್ದರು.

ಈಚೆಗೆ ಕೆಲವು ತಿಂಗಳುಗಳ ಹಿಂದೆ ಮೈಸೂರಿನ ಒಂದಿಬ್ಬರು ತರುಣ ಗೆಳೆಯರು ಹೈದರಾಬಾದಿಗೆ ಹೋಗಿ ತಿರುಮಲೇಶರನ್ನು ಭೆಟ್ಟಿಯಾಗಿ ಸೆಲ್ಫೀಗಳನ್ನು ಫೇಸ್‌ಬುಕ್‌ನಲ್ಲಿ ಹಾಕಿದ್ದನ್ನು ಕಂಡು ನನಗೆ ಸಂತೋಷವಾಗಿತ್ತು. ಯಾಕೆಂದರೆ ತಿರುಮಲೇಶ್ ಅಂಥ ಭೇಟಿಗಳನ್ನು ನಿಜಕ್ಕೂ ಇಷ್ಟಪಡುತ್ತಿದ್ದರು. ದಿನ ನಿತ್ಯದ ಸಣ್ಣಸಣ್ಣ ವಿಷಯಗಳನ್ನ, ವಸ್ತುಗಳನ್ನ ತಮ್ಮ ಕಾವ್ಯದ ಮೂಲಕ ಶೋಧಿಸುತ್ತಿದ್ದಂತೆಯೇ, ಅವರು ತಮ್ಮ ಜೀವನದಲ್ಲೂ ಅವುಗಳನ್ನು ಮುಖ್ಯವೆಂದು ಭಾವಿಸುತ್ತಿದ್ದರು. ಇಂಥದ್ದನ್ನು ಬರೆಯುವ ಅಗತ್ಯವಿಲ್ಲ ಅನ್ನುವಂಥ ಪ್ರಮೇಯವೇ ಅವರಿಗಿರಲಿಲ್ಲ. ಒಂದು ಪತ್ರದಲ್ಲಿ (ಜೂನ್ 5, 1997) ಹೀಗೆ ಬರೆಯುತ್ತಾರೆ: "... ಹೈದರಾಬಾದಿನ ಸೆಕೆಯಲ್ಲಿ ಬೇಯುತ್ತ ಈ ಕಾಗದ ಬರೆಯುತ್ತಿದ್ದೇನೆ. ಇಲೆಕ್ಟ್ರಿಸಿಟಿ ಆಗಾಗ ಬಂದು ಹೋಗುತ್ತ ಇರುತ್ತದೆ. ಸದ್ಯ ಟ್ರಿಪ್ಪಿಂಗ್ ಮಾಡ್ತಾ ಇದೆ. ಟ್ರಿಪ್ಪಿಂಗ್ ಅಂದರೆ ವೋಲ್ಟೇಜ್ ಕೆಳಗಿಳಿಯುವುದು. ಕಳೆದ ತಿಂಗಳು 10 ದಿನಗಳ ಮಟ್ಟಿಗೆ ಕಾಸರಗೋಡಿಗೆ ಹೋಗಿ ಬಂದೆ. 5 ವರ್ಷಗಳ ನಂತರ ಹೋದುದು. ನನ್ನ ಗೆಳೆಯರೊಬ್ಬರು ಈ ಮಧ್ಯೆ ತೀರಿಕೊಂಡರು, ಹಾಗೆಯೇ ನನ್ನ ಒಬ್ಬ ಅಕ್ಕ ಕೂಡ. ಕಾಸರಗೋಡಿನಲ್ಲೂ ಬಿಸಿಲ ಬೇಗೆ ಹೇಳತೀರದು. ನೀರಿನ ಬರ. ಹೀಗೆ ಹೆಚ್ಚೇನೂ ಓಡಾಡಲಾರದೆ ಒಂದೆಡೆ ಇದ್ದೆ. ಟಾಲ್‌ಸ್ಟಾಯ್‌ಯ 'ರಿಸರೆಕ್ಷನ್' ಓದಿದೆ. ಬೆಂಗಳೂರು ಮೂಲಕವೇ ಬಂದೆ. ಅರ್ಧ ಗಂಟೆ ಹೊತ್ತು ಲಂಕೇಶ್‌ನ ಭೇಟಿಯಾದೆ. ಹಾಯ್ ಬೆಂಗಳೂರು ಪತ್ರಿಕೆ ಅವರ ಮೇಲೆ ವೈಯಕ್ತಿಕ ಟೀಕೆ ಮಾಡಿತ್ತು. ಅದರಿಂದಲೂ ಬೇಸರವಾಯಿತು. ಲಂಕೇಶ್ ಎಲ್ಲರನ್ನು ಕಳಕೊಳ್ಳುತ್ತ ಇದ್ದರೂ ತಮ್ಮ ಸ್ವತಂತ್ರ ಮನೋಧರ್ಮ ಬಿಟ್ಟಿಲ್ಲ – ಅದು ಮುಖ್ಯ..."

ನನ್ನ ಹೈದರಾಬಾದ್ ಯಾತ್ರೆಗಳಿಲ್ಲದ ಸಂದರ್ಭಗಳಲ್ಲಿ, ನೀವು ಈಕಡೆ ಬರದೆ ತುಂಬ ಸಮಯ ಆಯಿತು, ಬಂದಿದ್ದರೂ ನನ್ನನ್ನು ಕಾಣದೇ ಹೋಗಿರಬಹುದೆ? ಎಂಬ ಆತಂಕವನ್ನು, ನಿಮಗೆ ಹುಷಾರಿಲ್ಲವೆಂದು ಯಾರೋ ತಿಳಿಸಿದರು, ಈಗ ಹೇಗಿದ್ದೀರೆಂಬುದನ್ನು ತಿಳಿಯಲು ಹಾಗೂ ನನ್ನ ಆತಂಕ ತಿಳಿಸುವುದಕ್ಕೆ ಈ ಕಾಗದ, ನಾನು ಇಂಥ ಕವಿಯ ಕವಿತೆಗಳನ್ನ ಅನುವಾದ ಮಾಡ್ತಾ ಇದೀನಿ – ಹೀಗೆ ಪ್ರತಿಯೊಂದು ಸಣ್ಣಪುಟ್ಟ ಸಂಗತಿಗಳಿಗೂ ಪತ್ರಗಳನ್ನು ಬರೆದು, ಕೂಡಲೇ ಉತ್ತರಿಸಲು ತಿಳಿಸುತ್ತಿದ್ದರು. ಅವರು ಅಲ್ಪ ಸಮಯಕ್ಕೆ ಬೇರೆ ಊರುಗಳಿಗೆ ಹೋದರೂ ಅಲ್ಲಿನ ವಿಳಾಸ ಕೊಟ್ಟು ಪತ್ರ ಬರೆಯಲು ಸೂಚಿಸುತ್ತಿದ್ದರು! "...ಸಾಹಿತ್ಯ ರಚನೆ ಇತ್ಯಾದಿಯೆಲ್ಲ ನಿಂತುಬಿಟ್ಟಿದೆ. ಬದುಕೋದೆ ಒಂದು ಸಮಸ್ಯೆಯಾಗಿರುತ್ತ ಬರೆಯುವುದು ಲಕ್ಷುರಿಯಾಗಿ ಅನಿಸುತ್ತಿದೆ. ಒಂದು ರೀತಿಯಲ್ಲಿ ಅಕ್ಷರವೇ ಲಕ್ಷುರಿ! ಅಕ್ಷರವಿಲ್ಲದೆ ಬದುಕುವುದೇ ಸರಿಯಿರಬಹುದೆ? ಆದರೆ ಕಾಲದಲ್ಲಿ ಹಿಂದಕ್ಕೆ ಸರಿಯುವಹಾಗಿಲ್ಲ. ಎಲ್ಲಾ ಬೇಡವೆನ್ನುತ್ತಿದ್ದಾಗಲೆ ಕಂಪ್ಯೂಟರ್ ಯುಗವೂ ಶುರುವಾಗಿಬಿಟ್ಟಿದೆ. ಇವತ್ತು ಇದೆಲ್ಲದರಿಂದ ಹೊರತಾದ ಕೇರಿಗಳೇ ಇಲ್ಲ – 'ದೀದಿ ತೇರ ದೀವಾನ'ದಿಂದ ಬಿಡುಗಡೆಯಿಲ್ಲ", (10.7.1995ರ ಪತ್ರ). "...ಮರಳಿ ಹೈದರಾಬಾದಿಗೆ ಬಂದು ಬದುಕಿನ ನೊಗವನ್ನು ಮತ್ತೆ ಹೆಗಲಿಗೇರಿಸಿಕೊಂಡು (ಒಣ) ಧೈರ್ಯದಿಂದ ಮುಂದೆ ಸಾಗುತ್ತಿದ್ದೇನೆ",(15.6.1988).

"ಫೋನ್‌ನಲ್ಲಿ ಹೇಳಿದ್ದೆ ನಾನು ಮಂಗಳೂರಿಗೆ ಹೋಗುತ್ತೇನೆ ಅಂತ. ನಿಮ್ಮನ್ನೆಲ್ಲ ನೋಡುವ ಆಸೆಯೂ ಇತ್ತು. ಈಗ ಮಾತ್ರ ಮಂಗಳೂರಿನ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸದಿರುವ ನಿರ್ಣಯ